ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 10-5-2017

# ಪತ್ರಿಕಾ ಆಮಂತ್ರಣ

1. 2017–18 ನೇ ಸಾಲಿನ ಮುಂಗಾರು ಹಂಗಾಮಿನ ಕಾರ್ಯಾಗಾರ

ಉದ್ಘಾಟನೆ:
ಕೃಷ್ಣ ಬೈರೇಗೌಡ,
ಕೃಷಿ ಸಚಿವರು, ಕರ್ನಾಟಕ ಸರ್ಕಾರ

ದಿನಾಂಕ: 11–05–2017 ರಂದು ಗುರುವಾರ. ಸಮಯ:ಬೆಳಿಗ್ಗೆ 11–00 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 419, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.

2. ಪತ್ರಿಕಾಗೋಷ್ಠಿ:

ಹೆಚ್. ಆಂಜನೇಯ,
ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ದಿನಾಂಕ: 11–5–2017 ಗುರುವಾರ, ಸಮಯ: ಮಧ್ಯಾಹ್ನ 1–00 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 334, ಸಮ್ಮೇಳನ ಸಭಾಂಗಣ, ವಿಧಾನ ಸೌಧ, ಬೆಂಗಳೂರು

3. ಪತ್ರಿಕಾಗೋಷ್ಠಿ:
ಕೊಲ್ಲಿ ರಾಷ್ಟ್ರಗಳಿಗೆ ಭಾರತದಿಂದ ವಲಸೆ ಹೋಗುವ ಕಾರ್ಮಿಕರ ಸಮಸ್ಯೆ ಕುರಿತು
ಡಾ: ಆರತಿ ಕೃಷ್ಣ, ಉಪಾಧ್ಯಕ್ಷರು, ಅನಿವಾಸಿ ಭಾರತೀಯ ಸಮಿತಿ.

ದಿನಾಂಕ: 11–5–2017 ಗುರುವಾರ, ಸಮಯ: ಅಪರಾಹ್ನ 12–30 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 6 ಮತ್ತು 7, ಅನಿವಾಸಿ ಭಾರತೀಯ ಸಮಿತಿ, ವಿಕಾಸ ಸೌಧ, ಬೆಂಗಳೂರು

# ಪತ್ರಿಕಾ ಪ್ರಕಟಣೆ

## ರಾಜ್ಯ ಮಟ್ಟದ ಮುಂಗಾರು ಹಂಗಾಮು ಕಾರ್ಯಾಗಾರ

**ಬೆಂಗಳೂರು, ಮೇ 10 ( ಕರ್ನಾಟಕ ವಾರ್ತೆ) :**

2017–18ನೇ ಸಾಲಿನ ರಾಜ್ಯ ಮಟ್ಟದ ಮುಂಗಾರು ಹಂಗಾಮು ಯೋಜನಾ ಕಾರ್ಯಾಗಾರವನ್ನು ಮೇ 11 ಮತ್ತು 12 ರಂದು, ಸಮಿತಿ ಸಭಾಂಗಣ, 419, 4ನೇ ಮಹಡಿ, ವಿಕಾಸ ಸೌಧದಲ್ಲಿ ಏರ್ಪಡಿಸಲಾಗಿದೆ.

ರಾಜ್ಯದಲ್ಲಿ ಕೃಷಿ ಪ್ರಧಾನವಾದ ಕಸುಬಾಗಿದ್ದು, ಹವಾಮಾನ ವೈಪರಿತ್ಯದಿಂದ ನಿರೀಕ್ಷಿತ ಮಟ್ಟದಲ್ಲಿ ಉತ್ಪಾದನೆಯನ್ನು ಸಾಧಿಸುವುದು ಕಷ್ಟಕರವಾಗಿದೆ. ಈ ನಿಟಿನಲ್ಲಿ ರೈತ ಅನೇಕ ಸವಾಲುಗಳನ್ನು ಎದುರಿಸಬೇಕಾಗಿದೆ. ರೈತನಿಗೆ ಎಲ್ಲ ವಿಧಗಳಲ್ಲಿ ಸಹಾಯ ಹಸ್ತ ನೀಡಲು ಕೃಷಿ ಇಲಾಖೆಯು ಶ್ರಮಿಸುತ್ತಿದೆ. ಕಳೆದ ಮೂರು ವರ್ಷಗಳಿಂದ ಸತತವಾಗಿ ಬರ ಪರಿಸ್ಥಿತಿ ಇದ್ದು, ರೈತರು ಸಂಕಷ್ಟದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ರೈತ ಸಮುದಾಯಕ್ಕೆ ಹಂಗಾಮು ಪೂರ್ವದಲ್ಲಿ ಸೂಕ್ತ ತಾಂತ್ರಿಕತೆಗಳನ್ನು ನೀಡುವುದು ಅವಶ್ಯಕವಾಗಿದೆ, ಪ್ರಸಕ್ತ ಸಾಲಿಗೆ ನಿಖರವಾದ ಕ್ರಿಯಾ ಯೋಜನೆಯನ್ನು ಹಾಗೂ ಪರ್ಯಾಯ ಬೆಳೆ ಪದ್ಧತಿ ಸಿದ್ದಪಡಿಸುವುದು ಅತಿ ಅವಶ್ಯಕವಾಗಿರುತ್ತದೆ.

2017–18 ನೇ ಸಾಲಿಗೆ ಆಹಾರ ಧಾನ್ಯಗಳ ಹಾಗೂ ಎಣ್ಣೆಕಾಳು ಬೆಳೆಗಳ ಉತ್ಪಾದನಾ ಗುರಿಯನ್ನು ಕ್ರಮವಾಗಿ 135 ಮತ್ತು 14 ಲಕ್ಷ ಟನ್ ಎಂದು ಹಮ್ಮಿಕೊಳ್ಳಲಾಗಿದೆ. ಈ ಗುರಿಯನ್ನು ಸಾಧಿಸಲು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳೊಡನೆ ಚರ್ಚಿಸಿ, ಅಳವಡಿಸಬೇಕಾದ ಹೊಸ ತಾಂತ್ರಿಕತೆಗಳನ್ನು ಗುರುತಿಸುವುದು, ಅವುಗಳ ಅಳವಡಿಕೆಗೆ ಬೇಕಾದ ವ್ಯವಸ್ಥೆ ಕಲ್ಪಿಸುವುದು, ಕರಪತ್ರ/ಭಿತ್ತಿಪತ್ರ ಮುಂತದ ಪ್ರಚಾರ ಸಾಮಗ್ರಿಗಳನ್ನು ಸಿದ್ಧಪಡಿಸುವದು, ಬೆಳೆವಾರು ನಿರ್ದಿಷ್ಟ ವಿಸ್ತರಣಾ ಕ್ರಿಯಾ ಯೋಜನೆಯನ್ನು ರೂಪಿಸುವುದು ಹಾಗೂ ವಲಯವಾರು ನಿರ್ದಿಷ್ಟ ಸಮಗ್ರ ಕೃಷಿ ಪದ್ಧತಿ ಮಾದರಿಯನ್ನು ರೂಪಿಸುವುದು ಈ ಕಾರ್ಯಾಗಾರದ ಮುಖ್ಯ ಉದ್ದೇಶವಾಗಿದೆ.

ಈ ಕಾರ್ಯದಲ್ಲಿ ಇತರೆ ಇಲಾಖೆ ಮತ್ತು ಸಂಸ್ಥೆಗಳಾದ Karnataka State Natural Disaster Management Centre(KSNDMC), International Crop Research Institute for Semi Arid Tropics(ICRISAT), Indian Council for Agriculture Research(ICAR), Central Reserch Institute for Dryland Agriculture(CRIDA), ತೋಟಗಾರಿಕೆ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆ ಭಾಗವಹಿಸುವಿಕೆಯೂ ಕೂಡ ಪ್ರಮುಖವಾಗಿರುತ್ತದೆ. ಅವರುಗಳೂ ಸಹ ಈ ಕಾರ್ಯಾಗಾರದಲ್ಲಿ ಭಾಗವಹಿಸಿ ಹವಾಮಾನ ಮುನ್ಸೂಚನೆ ಬಗ್ಗೆ ಮಾಹಿತಿ ಹಾಗೂ ಮುಂಗಾರು ಮಳೆ ವಿಫಲವಾದಲ್ಲಿ ಪರ್ಯಾಯ ಬೆಳೆಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ತಾಂತ್ರಿಕ ಸಲಹೆಗಳನ್ನು ಮತ್ತು ಮಣ್ಣು

& ನೀರು ಸಂರಕ್ಷಣಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿ ವಿಸ್ತರಣಾ ಸಿಬ್ಬಂದಿಗಳನ್ನು ಸಜ್ಜುಗೊಳಿಸುವ ಉದ್ದೇಶಹೊಂದಲಾಗಿದೆ.

ಈ ಬಗ್ಗೆ ಜಿಲ್ಲಾವಾರು ಚರ್ಚೆಯನ್ನು ಮಾಡಿ ಪ್ರತಿ ಜಿಲ್ಲೆಯಲ್ಲಿ ಕೈಗೊಳ್ಳಲಾಗುವ ಬೆಳೆವಾರು ಕಾರ್ಯಕ್ರಮಗಳನ್ನು ನಿರ್ಣಯಿಸಲಾಗುವುದು. ಇದಕ್ಕೆ ಪೂರಕವಾಗಿ ಕೃಷಿ ಪರಿಕರಗಳ ಬೇಡಿಕೆ ಬಗ್ಗೆ ಮಾಹಿತಿಯನ್ನು ಪಡೆದು ಪರಿಕರಗಳ ಸಮರ್ಪಕ ಸರಬರಾಜು ವ್ಯವಸ್ಥೆಯನ್ನು ಕಲ್ಪಿಸಲು ಸಂಬಂಧ ಪಟ್ಟ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುವುದು. 2017-18ನೇ ಸಾಲಿನ ಮಾರ್ಗಸೂಚಿಗಳನ್ನು ನೀಡಿ, ಇಲಾಖೆಯ ಪ್ರಮುಖ ಕಾರ್ಯಕ್ರಮಗಳು ಹಾಗೂ ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ಘೋಷಿಸಿದ ಹೊಸ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ವಿಸ್ತರಣಾಧಿಕಾರಿಗಳನ್ನು ಸಜ್ಜುಗೊಳಿಸುವ ಸದುದ್ದೇಶ ಹೊಂದಲಾಗಿದೆ ಎಂದು ಕೃಷಿ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಕೆಪಿಎಸ್‌ಸಿ ಪರಿಷ್ಕೃತ ವೇಳಾಪಟ್ಟಿ ಪ್ರಕಟ

**ಬೆಂಗಳೂರು, ಮೇ 10 ( ಕರ್ನಾಟಕ ವಾರ್ತೆ) :**

**ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 17-12-2016 ರ ಅಧಿಸೂಚನೆ, ದಿನಾಂಕ 21-01-2017 ರ ಸೇರ್ಪಡೆ ಅಧಿಸೂಚನೆ ಮತ್ತು ದಿನಾಂಕ 22-2-2017 ರ ತಿದ್ದುಪಡಿ/ ಸೇರ್ಪಡೆ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ವಿವಿಧ ಗ್ರೂಫ್ ಎ ಮತ್ತು ಗ್ರೂಫ್ ಬಿ ತಾಂತ್ರಿಕ /ತಾಂತ್ರಿಕೇತರ ಮತ್ತು ಗ್ರೂಫ್ ಸಿ ತಾಂತ್ರಿಕ ಹುದ್ದೆಗಳಿಗೆ ನಡೆಸಲಾಗುವ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ/ಸ್ವರ್ಧಾತ್ಮಕ ಪರೀಕ್ಷೆಗಳ ಪರಿಷ್ಕೃತ ವೇಳಾಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ಅಂತರ್ಜಾಲ http://kpsc.kar.nic.in/Time Table ನಲ್ಲಿ ಪ್ರಕಟಿಸಿದೆ.**

## ನೀರಿನ ಟ್ಯಾಂಕರ್ ಸಹಾಯಧನಕ್ಕಾಗಿ ನೋಂದಣಿ

**ಬೆಂಗಳೂರು, ಮೇ 10 ( ಕರ್ನಾಟಕ ವಾರ್ತೆ) :**

**ನೀರಿನ ಟ್ಯಾಂಕರ್ ಖರೀದಿಸಲು ಸಹಾಯಧನ ಕಾರ್ಯಕ್ರಮದಡಿ 2017-18 ನೇ ಮತ್ತು 2018-19ನೇ ಸಾಲಿಗೆ ನೀರಿನ ಟ್ಯಾಂಕರ್‌ಗಳ ಉತ್ಪಾದಕರನ್ನು ನೋಂದಣಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**ಆಸಕ್ತಿಯುಳ್ಳ ನೀರಿನ ಟ್ಯಾಂಕರ್ ಉತ್ಪಾದಕ ಸಂಸ್ಥೆಯವರು ನೋಂದಣಿ ಅರ್ಜಿಯನ್ನು ಹಾಗೂ ಷರತ್ತುಗಳು ಮತ್ತು ನಿಬಂಧನೆಗಳನ್ನೊಳಗೊಂಡಂತೆ ಪ್ರಪತ್ರವನ್ನು (ರಿಜಿಸ್ಟ್ರೇಷನ್ ಡಾಕ್ಯುಮೆಂಟ್) ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು) ಲಾಲ್‌ಬಾಗ್, ಬೆಂಗಳೂರು ಅವರ ಕಚೇರಿಯಿಂದ ದಿನಾಂಕ: 5-5-2017 ರಿಂದ 19-5-2017 ರವರೆಗೆ ಪಡೆಯಬಹುದು. ಅಥವಾ ನೋಂದಣಿ ಅರ್ಜಿ**

ಹಾಗೂ ಪ್ರಪತ್ರವನ್ನು ಇಲಾಖೆಯ ವೆಬ್‌ಸೈಟ್ **www.horticulture.kar.nic.in** ಮೂಲಕ ಪಡೆಯಬಹುದಾಗಿದೆ. ಅರ್ಜಿದಾರರು ಭರ್ತಿ ಮಾಡಿದ ಅರ್ಜಿಗಳನ್ನು ಹಾಗೂ ಸಂಬಂಧಿಸಿದಂ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20-5-2017 ಮಧ್ಯಾಹ್ನ 3 ಗಂಟೆ ಆಗಿರುತ್ತದೆ.

ನೋಂದಣಿ ಅರ್ಜಿಯ ಶುಲ್ಕ ರೂ. 1,000/- ಆಗಿದ್ದು ಇದನ್ನು ಡಿ.ಡಿ. ಮೂಲಕ "ಆಯುಕ್ತರು ತೋಟಗಾರಿಕೆ ಇಲಾಖೆ ಲಾಲ್‌ಬಾಗ್ ಬೆಂಗಳೂರು -4 ರವರ ಹೆಸರಿನಲ್ಲಿ ಪಾವತಿಸಬೇಕು. ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು) ಲಾಲ್‌ಬಾಗ್, ಬೆಂಗಳೂರು -4 ಇಲ್ಲಿ ಸಂಪರ್ಕಿಸಬಹುದು. ಇ-ಮೇಲ್ **adfruits@gmail.com** ದೂರವಾಣಿ ಸಂ. 080-26572324 ಆಯುಕ್ಗತರು, ತೋಟಗಾರಿಕೆ ಇಲಾಖೆ ಹಾಗೂ /ಅಥವಾ ರಾಜ್ಯ ಮಟ್ಟದ ಸಮಿತಿ (ಎಸ್‌ಎಲ್‌ಸಿ) ಯ ನಿರ್ಧಾರ ಅಂತಿಮವಾಗಿರುತ್ತದೆ.

# ಸಾಮಾಜಿಕ ಮೌಢ್ಯಗಳ ನಿವಾರಣೆಗಾಗಿ ವೈಜ್ಞಾನಿಕ ಚಿಂತನ ಮಂಥನ ಕಾರ್ಯಾಗಾರ 2017

<u>ಬೆಂಗಳೂರು, ಮೇ 10 ( ಕರ್ನಾಟಕ ವಾರ್ತೆ) :</u>

ವೈಜ್ಞಾನಿಕ ಚಿಂತನ ಮಂಥನ, ನಂಬಿಕೆ ವರ್ಸಸ್ ಮೌಢ್ಯತೆ ಮುಖಾಮುಖಿ ಶೀರ್ಷಿಕೆಯಡಿಯಲ್ಲಿ ಮೇ 19-20 ರಂದು ರಾಜ್ಯ ಮಟ್ಟದ ಎರಡು ದಿನಗಳ ವಿಶೇಷ ವೈಜ್ಞಾನಿಕ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಆಯೋಜಿಸುತ್ತಿದೆ.

ಕಾರ್ಯಾಗಾರವನ್ನು ಮಾರುತಿ ವಿದ್ಯಾ ಮಂದಿರ (ಎಂ.ವಿಎಂ ಶಾಲೆ) ಕನ್ನಮಂಗಲ, ಗೇಟ್ ನಿಲ್ದಾಣ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಟೋಲ್ ಹತ್ತಿರ, ಯಲಹಂಕ ದೇವನಹಳ್ಳಿ ಮಧ್ಯದಲ್ಲಿ ದೇವನಹಳ್ಳಿ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಸ್ತುತು ಕಾರ್ಯಾಗಾರದಲ್ಲಿ ವೈಜ್ಞಾನಿಕ ಚಿಂತಕರು, ಶಿಕ್ಷಕರು ಹಾಗೂ ಜನಸಾಮಾನ್ಯರಿಗೆ ಅಗತ್ಯವಾಗಿ ಹೊಂದಿರಲೇಬೇಕಿರುವ ವೈಜ್ಞಾನಿಕ ಮನೋಭಾವನೆ ಹಾಗೂ ಪ್ರಚಲಿತ ಸಾಮಾಜಿಕ ಮೌಢ್ಯಗಳ ಕುರಿತು ಜಾಗೃತಿ ಮೂಡಿಸಲು ಯೋಜಿಸಲಾಗಿದೆ. ಉದ್ದೇಶಿತ ಕಾರ್ಯಾಗಾರದಲ್ಲಿ ರಾಜ್ಯದ ವೈಜ್ಞಾನಿಕ ಚಿಂತಕರು, ವಿಜ್ಞಾನಿಗಳು, ಪವಾಡ ಬಯಲು ತಜ್ಞರು ಭಾಗವಹಿಸಲಿದ್ದು ಸಾಮಾಜಿಕ ಮೌಢ್ಯಗಳ ಬೇರೂರುವಿಕೆಯನ್ನು ತಡೆಗಟ್ಟುವ ದಿಸೆಯಲ್ಲಿ ಜಾಗೃತಿ ಮೂಡಿಸಲಿದ್ದಾರೆ.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವತಿಯಿಂದ ಸಾಮಾಜಿಕ ಮೌಢ್ಯಗಳ ನಿವಾರಣೆ ಕಾರ್ಯಕ್ರಮದ ರಾಜ್ಯ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ: ಹುಲಿಕಲ್ ನಟರಾಜ್ ಅವರು ಪ್ರಸ್ತುತ ಕಾರ್ಯಾಗಾರದಲ್ಲಿ ಪವಾಡ ರಹಸ್ಯ ಬಯಲು ತರಬೇತಿಯನ್ನು 2 ದಿನಗಳ ಕಾಲ ನೀಡಲಿರುವರು. ಕಾರ್ಯಕ್ರಮದ ದಿನಗಳಂದು ಊಟೋಪಚಾರ ಹಾಗೂ ವಸತಿ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಉಚಿತವಾಗಿ ಒದಗಿಸುತ್ತದೆ. ರಾಜ್ಯದ ಆಸಕ್ತ ಸಾರ್ವಜನಿಕರು ತರಬೇತಿ ಬೇಕಾದಲ್ಲಿ ದಿನಾಂಕ: 12-5-2017 ರೊಳಗಾಗಿ ತಮ್ಮ ಸ್ವವಿವರಗಳೊಂದಿಗೆ ಗೌರವ ಕಾರ್ಯದರ್ಶಿ, ಕರಾವಿಪ, ವಿಜ್ಞನ ಭವನ, ನಂ.

24/2 21 ನೇ ಮುಖ್ಯ ರಸ್ತೆ, ಬನಶಂಕರಿ 2 ನೇ ಹಂತ ಬೆಂಗಳೂರು –70 ಇಲ್ಲಿ ಪತ್ರ ಮುಖೇನ ಅಥವಾ ಇ ಮೇಲ್ krvp.info@gmail.com ಮೂಲಕ ನೋಂದಣಿ ಮಾಡಿಕೊಳ್ಳಬೇಕೆಂದು ಗಿರೀಶ್ ಕಡ್ಲೇವಾಡ, ಗೌರವ ಕಾರ್ಯದರ್ಶಿ, ಕರಾವಿಪ ಇವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ದೂರವಾಣಿ 080–23718939, ಮೊಬೈಲ್ 9483549159 ನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

## ಜನರಿಕ್ ಔಷಧಿಗಳನ್ನು ಸೂಚಿಸಲು ಕಡ್ಡಾಯ

<u>ಬೆಂಗಳೂರು, ಮೇ 10 ( ಕರ್ನಾಟಕ ವಾರ್ತೆ) :</u>

ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ರೋಗಿಗಳಿಗೆ ಹೊರ ಔಷಧಿ ಅಂಗಡಿಗಳಲ್ಲಿ ಲಭ್ಯವಾಗುವ ಪ್ರತ್ಯೇಕ ಬ್ರಾಂಡ್ ಔಷಧಿಗಳನ್ನು ಗೊತ್ತು ಮಾಡುತ್ತಾ ಅದನ್ನೇ ತೆಗೆದುಕೊಳ್ಳಲು ಪ್ರೇರೆಪಿಸುವ ವೈದ್ಯರುಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆಯುಷ್ ಸೇವೆಗಳ ಆಯುಕ್ತಾಲಯ ಸುತ್ತೋಲೆ ಹೊರಡಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸರ್ಕಾರಿ ಆಸ್ಪತ್ರೆಗಳ ವೈದ್ಯರು ರೋಗಿಗಳಿಗೆ ಪ್ರತ್ಯೇಕ ಬ್ರಾಂಡ್ ಔಷಧಿಗಳನ್ನು ಖರೀದಿಲು ಪ್ರೇರೆಪಿಸುವುದು ಹಾಗೂ ಒತ್ತಾಯಿಸುವುದು ಗಮನಕ್ಕೆ ಬಂದಿದ್ದು ಇದು ಕರ್ನಾಟಕ ಸರ್ಕಾರ ಹಾಗೂ ಇಲಾಖೆಗಳ ಸಾರ್ವಜನಿಕ ಆರೋಗ್ಯ ನೀತಿಯ ವಿರುದ್ಧವಾಗಿದೆ.

ಸರ್ಕಾರವು ಜನೌಷಧಿ/ಜನಸಂಜೀವಿನಿ ಆಂದೋಲನದ ಅಡಿಯಲ್ಲಿ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಔಷಧಿಗಳನ್ನು ಹತ್ತಿರದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಅತಿ ಕಡಿಮೆ ದರದಲ್ಲಿ ಸಿಗುವಂತೆ ಮಾಡುವುದು ಉದ್ದೇಶವಾಗಿದ್ದು ಇದರಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರಗಿನ ಔಷಧಿ ಮಳಿಗೆಗಳಿಂದ ಔಷಧಿಯನ್ನು ಖರೀದಿಸಲು ಪ್ರೇರೇಪಿಸುವುದು ಅಥವಾ ಒತ್ತಾಯಿಸುವುದು ಆಕ್ಷೇಪಾರ್ಹವಾಗಿದೆ.

ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಕ್ಷಿಪ್ರಗತಿಯಲ್ಲಿ ಇಲಾಖೆವತಿಯಿಂದ ಕೆ.ಸಿ.ಎಸ್.ಆರ್. ನಿಯಮಾವಳಿಗಳಂತೆ ಮತ್ತು ಎಂ.ಸಿ.ಐ. ಕಾಯ್ದೆಯ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು, ಸರ್ಕಾರಿ ಹಾಗೂ ಸರ್ಕಾರಿ ಸ್ವಾಮ್ಯದ ಎಲ್ಲಾ ಹಂತದ ಆಸ್ಪತ್ರೆಗಳಲ್ಲಿ ವೈದ್ಯರು ಜನೌಷಧಿ/ಜನಸಂಜೀವಿನ ಆಂದೋಲನದ ಅಡಿಯಲ್ಲಿ ಸೂಚಿಸಿರುವ ಜನರಿಕ್ ಔಷಧಿಗಳನ್ನೇ ರೋಗಿಗಳಿಗೆ ಸೂಚಿಸಬೇಕು ಎಂದು ಆಯುಕ್ತಾಲಯ ಪ್ರಕಟಣೆ ತಿಳಿಸಿದೆ.